ಶ್ರೀ ಎಚ್. ಡಿ. ದೇವೇಗೌಡ.—ನನ್ನ ಪ್ರಶ್ನೆಗಳಿಗೆ ಉತ್ತರ ಬಂದಹಾಗೆ ಕಾಣಲಿಲ್ಲ. 7—8 ತಿಂಗಳಿಂದ ಕೆಲವು ಪ್ರಶ್ನೆಗಳೂ ಹಾಗೇ ಇವೆ, ಉತ್ತರ ಬೇಗ ಕೊಡಲು ತೊಂದರೆಯೇನೋ ಗೊತ್ತಾಗಲಿಲ್ಲ. ಮುಖ್ಯಮಂತ್ರಿಗಳಿದ್ದಾರೆ, ಅವರು ಉತ್ತರ ಹೇಳಿದರೆ ಒಳ್ಳೆಯದು. ನನ್ನ ಪ್ರಶ್ನೆಗಳಿಗೆ ಉತ್ತರ ಕೊಡಲು ಅಡಚಣೆಯೇನು ಎಂಬುದನ್ನು ಅವರು ತಿಳಿಸಬಹುದು ಜನವರಿಯಲ್ಲಿ ಕಳಿಸಿರುವ ಪ್ರಶ್ನೆಗೆ ಇದುವರೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು.—ರೀನ್ಯೂ ಮಾಡಿದ್ದೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನನಗೆ ತಿಳಿವಳಿಕೆಯಿರುವ ಹಾಗೆ ಮಾಡಿದ್ದೇನೆ, 8 ತಿಂಗಳಿಂದ ಉತ್ತರ ಕೊಡಲು ತೊಂದರೆಯೇನು ಎಂಬುದನ್ನು ತಿಳಿಸಬೇಕು.

Sri D. DEVARAJ URS.—If there is any such delay. I will ask the Chief Secretary to find out why there is so much delay and see that those questions are answered early.

ಶ್ರೀ ಎ. ಎಂ. ಘಾಡಿ.—ಅಮ್ಮನವರೇ, ನಾನು ಎರಡು ಕಾಲ್ ಅಟೆನ್‌ಷನ್ ನೋಟೀಸ್‌ಗಳನ್ನು ಕಳಿಸಿ 15 ದಿವಸವಾಯಿತು, ಅದಕ್ಕೆ ಉತ್ತರ ಬಂದಿಲ್ಲ.

ಅಧ್ಯಕ್ಷರು.—ದಿವಸಕ್ಕೆ 2-3 ಕಾಲ್ ಅಟೆನ್‌ಷನ್ ನೋಟೀಸ್‌ಗಳನ್ನು ಹಾಕುತ್ತೀವೆ, ತಮ್ಮದೂ ಬರುತ್ತದೆ.

Sri H. M. CHANNABASAPPA.—I have been observing many times, that hon. Members addressing the Chair as "Amma-Thai" etc.. It would not be correct to address the Chair like that. So, I request the Chair that a direction may be given to address the Chair as "Madam Speaker, or Adhyakshare".

Karnataka Land Reforms (Amendment) Bill 1974—Introduction
Karnataka Land Reforms (Second) Amendment Bill, 1974—Considered

Sri N. HUTCHAMASTHI GOWDA.—I beg to move for leave of the House to introduce the Karnataka Land Reforms (Amendment) Bill, 1974.

Sri T. R. SHAMANNA.—I have given notice to oppose introduction of the Bill.

MADAM SPEAKER.—Motion moved. I observe that the hon. member wants to speak and he may be brief while explaining.

ಶ್ರೀ ಟಿ. ಆರ್. ಶಾಮಣ್ಣ.—ತಮಗೆ ತಿಳಿದಹಾಗೆ ಭೂ ಸುಧಾರಣಾ ಮಸೂದೆ ಅಸೆಂಬ್ಲಿಯಲ್ಲಿ ಪಾಸಾಗಿ 1961 ರಿಂದ ಇಲ್ಲಿಗೆ 14 ವರ್ಷವಾಗಿದೆ. ಅಲ್ಲದೆ ಈ ಸರಕಾರ ಅಸ್ತಿತ್ವಕ್ಕೆ ಬಂದಮೇಲೆ ಎರಡೂವರೆ ವರ್ಷಗಳಿಂದ ಅನೇಕ ತಿದ್ದುಪಡಿಗಳು ಬರುತ್ತಿವೆ. ಆದುದರಿಂದ ಸರಕಾರ ತಾಂತ್ರಿಕವಾಗಿ ಅಥವ ಸಹಜವಾದ ರೀತಿಯಲ್ಲಿ ಈ ಮಸೂದೆಯನ್ನು ತರದೆ ಪದೇ ಪದೇ ತಿದ್ದುಪಡಿಗಳನ್ನು ಮಾಡುತ್ತಿರುವುದರಿಂದ ಇದಕ್ಕಿರುವ ಪ್ರಾಧಾನ್ಯತೆ ಹೋಗಿ ಭೂಸುಧಾರಣೆಯನ್ನು ಯಾವ ಉದ್ದೇಶದಿಂದ ಮಾಡಲಾಗುತ್ತಿದೆಯೋ ಆ ಉದ್ದೇಶ ಕೈಗೂಡುವುದೇ ಎಂಬ ಸಂದೇಹ ಬರುತ್ತಿದೆ. ಹೀಗೆ ಪದೇ ಪದೇ ತಿದ್ದುಪಡಿ ಮಾಡುವುದರಿಂದ, ಸುಗ್ರೀವಾಜ್ಞೆಗಳನ್ನು ಹೊರಡಿಸುವುದರಿಂದ ಜನರಿಗೆ ಒಳ್ಳೆಯದಾಗದೆವುದಿಲ್ಲ. ಪೂನ್ನೆ ತಾನೆ ಆರ್ಡಿನೆನ್ಸ್ ಹೊರಡಿಸಿದರೂ ಕೂಡ ಬೆಂಗಳೂರು ನಗರವಲ್ಲಿ ಒಂಬು ಸಾವಿರ ಎಕರೆಯಷ್ಟು ಜಮೀನು ಪರಭಾರೆಯಾಗಿದೆ ನಿರ್ಬಂಧವಿದ್ದರೂ ಕೂಡ ಹೀಗಾಗಿದೆ. ಕೀಗೆ ವಿಳಂಬ ಮಾಡುತಾ, ಹೋಗುವುದರಿಂದ ಕೇಕಡಾ ಐವತ್ತರಷ್ಟು ಇರುವ ಜಮೀನು ಹೊರಟು ಹೋಗುತ್ತದೆ. ಇಂತಹ ಮಸೂದೆಗಳನ್ನು ತರುವುದರಿಂದ ಬರೀ ಕಾಲವಿಳಂಬವಾಗುತ್ತದೆಯೇ

ಏನಾ ಇದರಿಂದ ನಿಜವಾಗಿಯೂ ಯಾವ ಅನುಕೂಲಗಳೂ ಆಗುವುದಿಲ್ಲ. ಮತ್ತು ಬಡವರಿಗೆ ಜಮೀನು ಹಂಚುತ್ತೇವೆಂದು ಹೇಳುತ್ತಾರೆ. ಆದರೆ ಮುಂದೆ ಅವರಿಗೆ ಜಮೀನೇ ಹಂಚಲು ಉಳಿಯುವುದಿಲ್ಲ ಎಂದು ಹೇಳಬೇಕಾಗುತ್ತದೆ. ಇದನ್ನು ಮಾಡಬೇಕಾಗಿದ್ದರೆ ಸಹಜವಾಗಿ ರಾಜ್ಯಕ್ಕೆ ಇರುವ ಎಲ್ಲ ಜಮೀನುಗಳನ್ನೂ ವಶಕ್ಕೆ ತೆಗೆದುಕೊಂಡು ಆ ನಂತರ ಹಂಚಿಕೆ ಮಾಡಬಹುದು. ಈ ರೀತಿ ಅರ್ಧಂಬರ್ಧವಾಗಿ ತಿದ್ದುಪಡಿಗಳನ್ನು ತರುವುದನ್ನು ಕೈಬಿಡಬೇಕೆಂದು ನಾನು ಇಲ್ಲಿ ವಿರೋಧ ಮಾಡುತ್ತಿದ್ದೇನೆ. ಬಡವರಿಗೆ ಭೂಮಿ ಹಂಚಬೇಕು ಎಂದು ಏನು ಉದ್ದೇಶ ಇಟ್ಟುಕೊಂಡಿದ್ದೀರೋ ಅದರಂತೆ ಹಂಚಲಾಗುವುದಿಲ್ಲ. ಅಲ್ಲದೆ ಇದರ ಬಗ್ಗೆ ಕೆಲವು ಕಡೆ ಟ್ರಿಬ್ಯುನಲ್‌ಗಳನ್ನು ಮಾಡ ಬೇಕೆಂದು ಮಾಡಿದ್ದಾರೆ. ಈಗ ಇರುವ ಟ್ರಿಬ್ಯುನಲ್‌ಗಳು ರಚನೆಯಾಗಿರುವುದು ಕೇವಲ ಅವರ ಪಕ್ಷದವರನ್ನೇ ಅದರಲ್ಲಿ ಚುನಾಯಿಸಿರುವುದರಿಂದ ಇದರಿಂದ ಜನತೆಗೆ ಯಾವ ನ್ಯಾಯವೂ ಸರಿಯಾಗಿ ಸಿಗುವುದಿಲ್ಲ. ಇದರಿಂದ ಜನರಿಗೆ ಇನ್ನೂ ಕೊಂದರೆಗಳಾಗುತ್ತಿವೆ. ಇದಕ್ಕಾಗಿ ಇಲ್ಲ ತಂದಿರುವ ತಿದ್ದುಪಡಿಗಳನ್ನು ಕೈಬಿಡಬೇಕು ಮತ್ತು ಇದರಿಂದ ಯಾವ ಪ್ರಯೋಜನವೂ ಸಿಗುವುದಿಲ್ಲ ಮತ್ತು ಜನರಿಗೆ ಇಲ್ಲದ ಅಡ್ಡಿ ಆತಂಕಗಳೂ ಬರುತ್ತಿವೆ. ಇದಕ್ಕಾಗಿ ಇಲ್ಲಿ ಇಂತಹ ತಿದ್ದುಪಡಿಗಳನ್ನು ಮಂಡಿಸುವುದನ್ನೇ ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ.

2-00 P. M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಶಾಮಣ್ಣನವರು ಪದೇ ಪದೇ ಇಂತಹ ತಿದ್ದುಪಡಿಗಳನ್ನು ತರುವುದು ನಡಿಯಲ್ಲ ಎಂದು ಹೇಳಿದರು. ಎಷ್ಟೇ ಎಚ್ಚರಿಕೆ ವಹಿಸಿ ಈ ಭೂಸುಧಾರಣಾ ಮಸೂದೆಯನ್ನು ತಂದು ಕಾಯ್ದೆ ಮಾಡಿದ್ದರೂ ಕಡೆಗೆ ಈ ಭೂಸುಧಾರಣೆಯು ಎಲ್ಲ ನಿಷ್ಪಲವಾಗುತ್ತದೋ ಎನ್ನುವ ಸಂಶಯವನ್ನೂ ಅವರು ವ್ಯಕ್ತಪಡಿಸಿದರು. ಇಂತಹ ಒಂದು ಪ್ರಾಮುಖ್ಯವಾದ ಮಸೂದೆಯನ್ನು ಕಾನೂನು ಮಾಡುವಾಗ ಎಷ್ಟೇ ಎಚ್ಚರಿಕೆ ವಹಿಸಿದ್ದರೂ ಕೂಡ ಆಗಿಂದಾಗ್ಗೆ ಕೆಲ ಕೆಲವು ಬದಲಾವಣೆಗಳನ್ನು ಹಾಗೂ ಇತರ ಬೆಳವಣಿಗೆ ಗಳನ್ನು ನೋಡಿಕೊಂಡು ಮಾಡುವಾಗ ಕೆಲವು ತಿದ್ದುಪಡಿಗಳನ್ನು ತರುವುದು ಅವಶ್ಯಕವಾಗುತ್ತದೆ. ಮಾನ್ಯ ಸದಸ್ಯರು ತಮ್ಮ ಪೂರ್ಣ ಶಕ್ತಿಯನ್ನುಪಯೋಗಿಸಿ ಇದನ್ನು ವಿರೋಧ ಮಾಡುವ ಕಾಲಕ್ಕೆ ಅವರನ್ನೂ ಒಪ್ಪಿಸಿ ತರಲು ಎಷ್ಟು ಕಾಲವಾಯಿತು ಎನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಜನರಿಗೆ ಇದರಲ್ಲಿ ಅಲ್ಪಸ್ವಲ್ಪ ತೊಂದರೆಗಳು ಬಂದಾಗ ಅವುಗಳನ್ನು ಪರಿಹಾರ ಮಾಡಲು ಮತ್ತು ಅವರ ಹಾದಿಯನ್ನು ಸುಗಮವಾಗಿ ಮಾಡಲು ಇಂತಹ ತಿದ್ದುಪಡಿಗಳನ್ನು ಮಾಡಬೇಕಾಗಿ ಬರುತ್ತದೆ ಇದಕ್ಕಾಗಿ ಇಲ್ಲಿ ಇಂತಹ ತಿದ್ದುಪಡಿಗಳನ್ನು ತರುವುದು ಅಗತ್ಯವಾಯಿತು ಎಂದು ಇಷ್ಟು ಮಾತ್ರ ತಿಳಿಸಲು ಇಚ್ಛಿಸುತ್ತೇನೆ

Madam SPEAKER.—I put the motion to the vote the question is :

That leave be granted to introduce the Karnataka Land Reforms (Amendment) Bill, 1974.

The motion was adopted

Sri N. HUTCHAMASTHI GOWDA.—I beg to introduce the Karnataka Land Reforms (Amendment) Bill, 1974.

Madam SPEAKER.—The Karnataka Land Reforms (Amendment) Bill, 1974, is introduced. **The Minister may move the next one also.

**Bills appended as Annexures to this volume.